## <u>ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ</u>

## <u>ಕೆ.ಆರ್.ನಗರ</u>

## <u>ಸಿ.ಸಿ.  127/2022</u>

**<u>ಪಿಡಬ್ಲೂ-5</u>**

**<u>ಸಿಡಬ್ಲೂ-6</u>**

| | | |
|---|---|---|
| ಸಾಕ್ಷಿದಾರರ ಹೆಸರು | - | ಸಿ.ಕೆ ಹರೀಶ್ |
| ತಂದೆಯ   ಹೆಸರು | - | ಕಾಳೇಗೌಡ |
| ವಯಸ್ಸು | - | 37 ವರ್ಷ |
| ಕೆಲಸ | - | ಖಾಸಗಿ ಕೆಲಸ |
| ವಾಸ | - | ಚುಂಚನಕಟ್ಟೆ ಗ್ರಾಮ |

**<u>ದಿನಾಂಕ 04/06/2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.</u>**

**<u>ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ</u>**

ಚಾಸಾ-1 ರಿಂದ 5 ಮತ್ತು 7 ನನಗೆ ಗೊತ್ತಿಲ್ಲ. ಆರೋಪಿ ನನಗೆ ಗೊತ್ತಿಲ್ಲ. ನಾನು ಪೋಲೀಸರ ಸಮಕ್ಷಮ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.  ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಸಾಕ್ಷಿಯು ಸದರಿ ದಾಖಲೆಯಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ಸ್ಥಳ ಪಂಚನಾಮೆಯಾಗಿದ್ದು ಸದರಿ ದಾಖಲೆಯನ್ನು ಈಗಾಗಲೇ **ನಿಪಿ 3** ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು **ನಿಪಿ 3(ಬಿ)** ಎಂದು ಗುರುತಿಸಲಾಯಿತು. ನಿಪಿ-3 ಕ್ಕೆ ನಾನು ಪೋಲೀಸಿನವರ ಮಾತನ್ನು ಕೇಳಿ ಸಹಿ ಮಾಡಿರುತ್ತೇನೆ. ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಜರುಗಿಸಿಲ್ಲ. ನಿಪಿ-3 ಕ್ಕೆ ಯಾವ ದಿನಾಂಕದಲ್ಲಿ ಸ್ಥಳ ಹಾಗೂ ಸಮಯದಲ್ಲಿ ಸಹಿ ಮಾಡಿದ್ದೇನೆಂದು ನನಗೆ ನೆನಪಿಲ್ಲ.

ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು.

**ಪಾಟೀ ಸವಾಲು ಮಾನ್ಯ ಎಪಿಪಿಯವರಿಂದಃ**

ದಿಃ 05/10/2021 ರಂದು ಪೋಲೀಸರು ಘಟನಾ ಸ್ಥಳವಾದ ಚುಂಚನಕಟ್ಟೆ ಗ್ರಾಮದಲ್ಲಿರುವ ಕರ್ನಾಟಕ ಗ್ರಾಮೀಣ ಬ್ಯಾಂಕ್ ನ ಆವರಣದಲ್ಲಿ ನನ್ನ ಹಾಗೂ ಚಾಸಾ1 ಮತ್ತು 7 ರವರ ಸಮಕ್ಷಮ ಕೇಸಿನ ವಿಚಾರವಾಗಿ ಆರೋಪಿ ಚಾಸಾ1 ರವರ ಖಾತೆಯಲ್ಲಿ 7 ಸಾವಿರ ಹಣವನ್ನು ಹಿಂಪಡೆದು ಅದನ್ನು ಅವರೇ ಇಟ್ಟುಕೊಂಡು ಚಾಸಾ1 ರವರಿಗೆ ಮೋಸ ಮಾಡಿದ ಹಿನ್ನೆಲೆಯಲ್ಲಿ ಪ್ರಕರಣ ದಾಖಲಾಗಿದ್ದು ಈ ಕುರಿತು ಪಂಚನಾಮೆಯನ್ನು ಚಾಸಾ.1 ರವರು ತೋರಿಸಿಕೊಟ್ಟ ಸ್ಥಳದಲ್ಲಿ ಪರಿಶೀಲನೆಯನ್ನು ಮಾಡಿ ಪಂಚನಾಮೆಯನ್ನು ಬೆಳಿಗ್ಗೆ 11 ಯಿಂದ 11.30 ಗಂಟೆಯ ವೆರೆಗೆ ಬರೆದು, ಸ್ಥಳದಲ್ಲಿ ಹಾಜರಿದ್ದ ನನ್ನ ಚಾಸಾ 1 ಮತ್ತು 7 ರವರ ಸಹಿಗಳನ್ನು ಸಹ ಅದೇ ಸ್ಥಳದಲ್ಲಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

ಆರೋಪಿಗೆ ಸಹಾಯ ಮಾಡಲು ನನಗೆ ಎಲ್ಲಾ ವಿಚಾರಗಳು ತಿಳಿದಿದ್ದರೂ ಸಹ ಅದನ್ನು ಮರೆ ಮಾಚಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

**(ಚಂದನ್ ಎಸ್ )**

ಪ್ರಧಾನ ಸಿವಿಲ್ ನ್ಯಾಯಾಧೀಶರು,

ಮತ್ತು ಪ್ರದನ್ಯಾದಂ., ಕೆ.ಆರ್.ನಗರ